ಅಲ್ಲೊಂದು ಸುತ್ತು ತಿರುಗಣಿ ಯಂತ್ರ ರಭಸದಿಂದ ತಿರುಗುತ್ತಿತ್ತು. ದಟ್ಟ ಜನಸಂದಣಿಯಿಂದ ಅದು ತುಂಬಿ ತುಳುಕಿತ್ತು. ಸ್ತ್ರೀ, ಪುರುಷರು ಹಾಗೂ ಮಕ್ಕಳನ್ನು ಸುತ್ತು ಹಾಕಿಸುತ್ತಿದ್ದ ಅದರಲ್ಲಿ ಮಂದಿಯ ಕೇಕೆ, ನಗುವಿನ ಅಬ್ಬರವಿತ್ತು. ಗರಗರ ಸುತ್ತುತ್ತಿದ್ದ ಅದರೊಡನೆ ತಾನೂ ಸುತ್ತು ಹಾಕಿದಂತೆನಿಸಿ ಅದು ಅದನ್ನು ಮನನೆಟ್ಟು ನೋಡಿತು. ಅದರ ವದನದಲ್ಲಿ ಕೆಂಪಡರಿದ ಮುಗುಳ್ನಗೆ ಹೊರಸೂಸಿ ತಿರುಗಣೆಯ ಚಲನೆಯೊಂದಿಗೆ ಅದರ ನಯನಗಳಲ್ಲೂ ತರಂಗಗಳೆದ್ದವು. ಅದರ ತುಟಿಗಳು ಬೆರಗಿನಿಂದ ಅರ್ಧ ತೆರೆದಿದ್ದು, ಅದರ ಸುತ್ತಾ ತಾನೇ ಗರಗರ ಸುತ್ತು ಹಾಕುತ್ತಿರುವೆನೆಂಬ ಭಾವನೆ ಮನಸಿಗೆ ತಟ್ಟಿತು. ಆ ವರ್ತುಲ ಚಕ್ರ ಪ್ರಾರಂಭಕ್ಕೆ



ವೇಗವಾಗಿ ತಿರುಗಲಾರಂಭಿಸಿ ಕ್ರಮೇಣ ಮಂದಗತಿಗೆ ಇಳಿಯಿತು. ಪ್ರಸಕ್ತ, ಪರವಶತೆಯಿಂದ, ಮಗು, ಬಾಯೊಳಗೆ ಬೆರಳನಿಟ್ಟುಕೊಂಡು 'ಓ! ಸದ್ಯ ನಿಲ್ಲಲಿ' ಎಂದು ಆಶಿಸಿತು. ಈ ಸಲ, ಅದರ ಹತ್ತಿಕ್ಕಲಾರದ ಅಂತಃಸ್ಫೂರ್ತಿಯ ಚಲನಾ ಸಂವೇದನೆಗೆ ಎಂದಿನಂತೆ ಪೋಷಕರು ಸತತ ತಣ್ಣೀರು ಎರಚುವ ಮುನ್ನ ಅದು ಈಗ ಮೊಂಡು ಧೈರ್ಯದಿಂದ ಪಟ್ಟು ಹಿಡಿದು 'ನಾನು ತಿರುಗಣೆ ಮೇಲೊಂದು ಸುತ್ತು ಹಾಕುವೆ ಅಪ್ಪಾ.... ಅಮ್ಮಾ...' ಎಂದು ಗೋಗರೆಯಿತು.

ಮಾತೇ ಇಲ್ಲ. ಅಮ್ಮ ಅಪ್ಪರ ಮುಖ ನೋಡಲು ತಿರುಗಿತು. ಅಲ್ಲಿ ಅವರಿರಲಿಲ್ಲ. ಮುಂದೆ ಹೋಗಿದ್ದರು. ಅಕ್ಕಪಕ್ಕ ನೋಡಿತು. ಎಲ್ಲೂ ಕಾಣಲಿಲ್ಲ, ಹಿಂದೆ ನೋಡಿತು ಸುಳಿವೇ ಇಲ್ಲ!

ಅದರ ಒಣಗಿದ ಗಂಟಲಿನಿಂದ ಭಾರಿ ಅಳು ಒತ್ತರಿಸಿ ಬಂದಿತು, ಭೀತಿಗೊಳಗಾದ ಅದು ದುಃಖ ಉಮ್ಮಳಿಸಿ ಬಂದು ಬಿಕ್ಕುತ್ತಾ ನಿಂತಿದ್ದ ಜಾಗದಿಂದ 'ಅಮ್ಮ.... ಅಪ್ಪಾ....' ಎಂದು ಕೂಗುತ್ತಾ ಓಡಿತು ಒಂದೇ ಸಲಕ್ಕೆ. ಅದರ ನಯನಗಳಿಂದ ಕಣ್ಣೀರ ಕೋಡಿ ಧಾರೆಧಾರೆಯಾಗಿ ಹರಿಯಿತು, ಭೀತಿಯಿಂದ ಅದರ ವದನ ಕೆಂಪೇರಿ ನಡುಗುತ್ತಿತ್ತು. ಗಾಬರಿಗೊಂಡ ಅದು ಮೊದಲು ಒಂದು ಕಡೆಗೆ ಓಡಿತು. ಬಳಿಕ ಮತ್ತೊಂದು ಕಡೆಗೆ, ಹೀಗೆ ಮುಂದಕ್ಕೂ ಹಿಂದಕ್ಕೂ, ಸುತ್ತೆಲ್ಲ ದಡಬಡನೆ ಓಡಿತು. ಕಕ್ಕಾಬಿಕ್ಕಿಯಾಗಿ ಯಾವ ಕಡೆ ಹೋಗಬೇಕೆಂದು ತಿಳಿಯದೆ.

'ಅಮ್ಮ, ಅಪ್ಪಾ' ಎಂದು ಕೂಗುತ್ತಾ ಗೋಳೋ ಎಂದು ರೋದಿಸಿತು. ಕಣ್ಣಾಲಿ ಒದ್ದೆಯಾದವು, ಕರ್ಣಭೇದಕವಾಗಿ ಕಿರುಚಿತು. ಒಂದೇ ಸಮನೆ, ಉಸಿರುಕಟ್ಟಿತು, ಗದ್ಗದಿತವಾದ ಅದರ ಗಂಟಲು ಈಗ ಅದರದೇ ಉಗುಳು ನುಂಗಿ ಆರ್ದ್ರವಾಯಿತು. ಅದರ ಹಳದಿ ಮುಂಡಾಸು ಬಿಚ್ಚಿತು, ಬೆವೆತ ಅದರ ದೇಹದೊಂದಿಗೆ ಅದು ಧರಿಸಿದ ದಿರಿಸು ನೆಂದು ಮೆತ್ತಗಾದವಲ್ಲದೆ ಅದರ ದೇಹದ ಬೆವರಿನೊಂದಿಗೆ ಬಾಹ್ಯ ದೂಳು ಮೆತ್ತಿಕೊಂಡು ಅವು ಮಾಸಿದವು ಕೂಡ. ಅದರ ಹಗುರ ದೇಹಾಕೃತಿ ಸೀಸದ ಮೊತ್ತದಂತೆ ಭಾರವಾಯಿತು ಈಗ.

ಬರಿ ಕ್ರೋಧಾವೇಶದ ಪರಿಣಾಮ ತುಸು ಹೊತ್ತು ಅತ್ತಿಂದಿತ್ತ ಇತ್ತಿಂದಿತ್ತ ಗಡಬಡಿಸಿ ಓಡಿತು, ಬಳಿಕ ಸೋತು ತಟಸ್ಥಗೊಂಡ ಮೇಲೆ, ಅಳು ಕೇಳಿಸದಂತಾಗಿ ಬಿಕ್ಕುತ್ತ ಗದ್ಗದಿತವಾಯಿತು. ಅನತಿ ದೂರದಲ್ಲಿ ಹುಲ್ಲು ಹಾಸಿನ ಮೇಲೆ ಅದರ ಮಬ್ಬು ಕಣ್ಣುಗಳಿಗೆ ಸ್ತ್ರೀ, ಪುರುಷರು ಮಾತನಾಡುತ್ತಿರುವುದು ಕಾಣಿಸಿತು. ನಿಗಾ ಇಟ್ಟು ದಿಟ್ಟಿಸಿ ನೋಡಿತು, ಹೊಳೆವ ಹಳದಿ ದಿರಿಸಿನ ಸಮೂಹದತ್ತ, ಅದರೆ ಆ ಗುಂಪಿನಲ್ಲೂ ತನ್ನ ಅಪ್ಪ, ಅಮ್ಮನ, ಚಹರೆ ಹೋಲುವವರು ಯಾರೂ ಕಾಣಲಿಲ್ಲ. ಅಲ್ಲಿದ್ದ ಜೋಡಿ ದಂಪತಿ ಕೇವಲ ಮಾತನಾಡಬೇಕು, ನಗಬೇಕು ಎಂಬ ಒಂದೇ ಕಾರಣಕ್ಕೆ ಹಾಗೆ ವರ್ತಿಸುತ್ತಿದ್ದಂತೆ ಕಂಡು ಬಂದರು. ಪುನಃ ತಡಬಡಿಸಿ ಓಡಿತು, ಈ ಸಾರಿ ದೇವಾಲಯದ ಕಡೆಗೆ. ಅಲ್ಲಿ ವಿಪರೀತ